# ಅಳಿವಿಲ್ಲದ ‘ನಾದದ ನದಿ’

## ಮೇರುಗಾಯಕ, ಶಿಷ್ಯವತ್ಸಲ ರಾಜನ್ ಮಿಶ್ರಾ ನುಡಿನಮನ



ಹಿಂದೂಸ್ತಾನಿ ಸಂಗೀತದ ಬನಾರಸ್ ಘರಾಣೆಯಲ್ಲಿ ಹಾಡುತ್ತಿದ್ದ ಮೇರು ಗಾಯಕ ಪಂ. ರಾಜನ್ ಮಿಶ್ರಾ ಅವರು ಏಪ್ರಿಲ್ 25ರಂದು ನಾದಲೋಕ ಸ್ತಬ್ದಗೊಳಿಸಿದ್ದಾರೆ. ಪದ್ಮಭೂಷಣ ಪುರಸ್ಕೃತ ಈ ಸುಪ್ರಸಿದ್ಧ ಗಾಯಕರೊಂದಿಗೆ ಸುಮಾರು 20 ವರ್ಷಗಳ ಕಾಲ ಒಡನಾಟವಿದ್ದ ಅವರ ಹಿರಿಯ ಶಿಷ್ಯರಾದ ಅನಂತ ಹೆಗಡೆ ತಮ್ಮ ಗುರುವಿನ ಸ್ಮರಣೆ ಮಾಡಿದ್ದಾರೆ.

■ ಹೆಗ್ಗಾರ ಅನಂತ ಹೆಗಡೆ

‘ಗುರೂಜಿ ಅವರು ಸಂಗೀತದಲ್ಲಿ ಸಾಧನೆಯ ಶಿಖರ. ಅವರ ಶಿಷ್ಯತ್ವ ಪಡೆಯಬೇಕಾದರೆ ನಮ್ಮಲ್ಲಿರುವ ಕಲೆಗಾರಿಕೆಯಲ್ಲಿ ಪ್ರಬುದ್ಧತೆ ಇರಲೇಬೇಕಿತ್ತು. ನಾನು ಪಂ. ರಾಜನ್ ಮಿಶ್ರಾ ಅವರನ್ನು ಮೊದಲ ಬಾರಿಗೆ ಭೇಟಿಯಾದದ್ದು ಹೈದರಾಬಾದ್‌ನಲ್ಲಿ. ಬೆಂಗಳೂರಿನಿಂದ ಅವರನ್ನು ಭೇಟಿಯಾಗಲೆಂದೇ ಅಲ್ಲಿನ ಪೊಲೀಸ್ ತರಬೇತಿ ಕೇಂದ್ರದಲ್ಲಿ ಏರ್ಪಡಿಸಿದ್ದ ಅವರ ಕಛೇರಿಗಾಗಿ ಹೋಗಿದ್ದೆ. ಅದು 2001ನೇ ಇಸವಿ. ರಾತ್ರಿ ಏಳು ಗಂಟೆಗೆ ಅವರ ಕಛೇರಿ ಇತ್ತು. ಮೊದಲೇ ಅನುಮತಿ ಪಡೆದಿದ್ದರಿಂದ ಒಂಬತ್ತು ಗಂಟೆಯ ವೇಳೆಗೆ ಕಛೇರಿ ಮುಗಿದ ಬಳಿಕ ಅವರನ್ನು ಭೇಟಿಯಾಗಿ ಪರಿಚಯ ಮಾಡಿಕೊಂಡೆ. ನನ್ನ ಸಂಗೀತ ಹಿನ್ನೆಲೆ ತಿಳಿದುಕೊಂಡ ಅವರು ಡೆಹ್ರಾಡೂನ್‌ನಲ್ಲಿ ತಾವು ಸ್ಥಾಪಿಸಿದ ಸಂಗೀತ ಗುರುಕುಲಕ್ಕೆ ಬರುವಂತೆ ಆಹ್ವಾನಿಸಿದರು. ಅವರ ಆಹ್ವಾನದಂತೆ ಕೆಲವೇ ದಿನಗಳಲ್ಲಿ ಡೆಹ್ರಾಡೂನ್‌ಗೆ ಹೋದೆ. ಗುರು–ಶಿಷ್ಯ ಪರಂಪರೆಯಲ್ಲಿರುವ ಅಲ್ಲಿಯ ಸಂಗೀತ ಗುರುಕುಲಕ್ಕೆ ದೇಶದ ನಾನಾ ಭಾಗಗಳಿಂದ ಅವರ ಶಿಷ್ಯರು ಬಂದು ಸಂಗೀತ ಕಲಿಯುತ್ತಾರೆ.

ಅದು ಗುರುಪೂರ್ಣಿಮೆಯ ದಿನ. ಗುರು ನಮನ ಸಲ್ಲಿಸಲೆಂದೇ ಅಲ್ಲಿ ಮೂರು ದಿನಗಳ ಬೈಠಕ್ ಏರ್ಪಡಿಸುತ್ತಾರೆ. ದೇಶದ ಉದ್ದಗಲದಿಂದ ಬಂದ ಅವರ ಶಿಷ್ಯಂದಿರು, ಹಿರಿಯ ಸಂಗೀತಗಾರರು ಸೇರುತ್ತಾರೆ. ಆ ವೇದಿಕೆಯಲ್ಲಿ ಶಿಷ್ಯಂದಿರೆಲ್ಲರೂ ಒಂದೊಂದು ರಾಗವನ್ನು ಹಾಡಬೇಕಿತ್ತು. ನನಗೆ ಆಶ್ಚರ್ಯವೆಂಬಂತೆ ಅಂದಿನ ಬೈಠಕ್‌ನಲ್ಲಿ ನನ್ನದೇ ಮೊದಲ ಹಾಡುಗಾರಿಕೆ. ನಾನು ರಾಗ ‘ಪೂರಿಯಾ ಧನಾಶ್ರೀ’ಯನ್ನು ಆಲಾಪದೊಂದಿಗೆ ವಿಲಂಬಿತ್ ಲಯದಲ್ಲಿ ಹಾಡುತ್ತಾ, ಸ್ವರ, ಆಕಾರ್, ಬೋಲ್ ತಾನ್‌ಗಳನ್ನು ಪ್ರಸ್ತುತಪಡಿಸಿದೆ. ಆಗ ಗುರೂಜಿ ಬಹಳ ಖುಷಿಪಟ್ಟರು. ಸಭೆಯಿಂದ ಎದ್ದು ಬಂದು ನನ್ನನ್ನು ಆಲಂಗಿಸಿ, ‘ಇವರು ಬೆಂಗಳೂರಿನಿಂದ ಬಂದ ನನ್ನ ಶಿಷ್ಯ’ ಎಂದು ನೆರೆದವರಿಗೆ ಪರಿಚಯ ಮಾಡಿಕೊಟ್ಟರು. ಅಂದಿನಿಂದ ನನ್ನನ್ನು ‘ಯು ಆರ್ ಮೈ ಸೌತ್ ಇಂಡಿಯನ್ ರೆಪ್ರೆಸೆಂಟೇಟಿವ್’ ಎನ್ನಲಾರಂಭಿಸಿದರು. ಅವರು ದೇಶವಿದೇಶಗಳಲ್ಲಿ ಕಛೇರಿ ಸಲುವಾಗಿ ಸಂಗೀತ ಯಾತ್ರೆ ನಡೆಸುವ ಕಾರಣ ಗುರುಕುಲದಲ್ಲಿ ಲಭ್ಯರಿರುವುದೇ ಕಡಿಮೆ. ಅವರು ಗುರುಕುಲದಲ್ಲಿ ಇರುವ ಸಮಯದಲ್ಲಿ ನನಗೆ ಫೋನ್ ಮಾಡಿ ತಿಳಿಸುತ್ತಿದ್ದರು. ಹೀಗಾಗಿ ಅನೇಕ ಸಲ ಅಲ್ಲಿಗೆ ಹೋಗಿಯೇ ಅವರಿಂದ ಮಾರ್ಗದರ್ಶನ ಪಡೆದಿದ್ದೇನೆ.

ಕಳೆದ ವರ್ಷದವರೆಗೂ ಪ್ರತೀ ವರ್ಷ ಐದಾರು ಬಾರಿಯಾದರೂ ಬೆಂಗಳೂರಿಗೆ ಬರುತ್ತಿದ್ದರು. ಬಂದಾಗಲೆಲ್ಲ ನನಗೆ ಫೋನ್



ಡೆಹ್ರಾಡೂನ್‌ನ ಸಂಗೀತ ಗುರುಕುಲದಲ್ಲಿ 2001ರಲ್ಲಿ ಪಂ. ರಾಜನ್‌ಮಿಶ್ರಾ ಅವರೊಂದಿಗೆ ಹೆಗ್ಗಾರ ಅನಂತ ಹೆಗಡೆ